# ರತಿಪತಿ ಪಿತನೆಂಬ ಚೆಲುವ

## (ಕೃಷ್ಣ ಮಹಿಮಾ ಸುಳಾದಿ)

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 126.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru, page No. 148.
3. **Ref.:** Purandara Dasara Suladigalu – Edited by Shri Pavanje Gururao, Sriman Madhwa Siddantha Granthalaya, Udupi (1927), page No. 11.
4. **Note:** Lyrics given without highlights are as per Ref. 1. The wordings in Ref. 2 are fully matching with Ref. 1. But the wordings in Ref. 3 are slightly different and are given in yellow highlights.
5. **Note:** Lyrics in Ref. 1 is more apt than in Ref. 2.

### ಧ್ರುವ ತಾಳ

ರತಿಪತಿ ಪಿತನೆಂತೆಂಬ ಚೆಲುವ ನೀನುಳಿದು

ಕ್ಷಿತಿಯಲಿ ವರಾಹ ರೂಪ ಧರಿಸುವರೇನೊ ಹರಿಯೆ

ಸಿರಿ–ಭೂದೇವಿಯರು ಸತಿಯರಾಗಿರಲು

ಅಡವಿಯೊಡಾಳುವ ಕರಡಿಯ ಮಗಳನು ಮೆಚ್ಚುವರೆ ?

ಪುರಾಣ ಪುರಷೋತ್ತಮನೆ ನೀನಮೃತಕೆ

ನಾರಾಯಣಿಯಾಗಿ ಮೋಹಿಪರೆ ?

ಜಗಕಾಶ್ಚರ್ಯ ಚಾರಿತ್ರ್ಯವುಂಟೆ, ಎಲೆ ದೇವ

ಪುರಂದರ ವಿಠಲ ದೇವರ ದೇವ

ಶರಣಾಭರಣವೆ ನಿನಗೆ ನಾನು ನಮೋ ಎಂಬೆ ॥ ೧ ॥

### ಮಟ್ಟೆ ತಾಳ

ಜ್ಞಾನ ಭಕುತಿ ಏನು ಇಲ್ಲದ ಹೀನನಾದ ಕಾರಣ
ನಾನು ನನ್ನದೆಂಬ ಹಮ್ಮು ಮಮತೆಗಳು
ಏನ ಮಾಡಲು ಬೆನ್ನ ಬಿಡವು
ನೀನೇ ಸ್ವತಂತ್ರನು ನಿನ್ನ ದಾಸನು ನಾನು
ಎನಿಸೆನು ಪುರಂದರ ವಿಠಲ ॥ ೨ ॥

**ತ್ರಿವಿಡೆ ತಾಳ**

ನಾನೊಬ್ಬನೆ ನಿನ್ನ ದಾಸನಾದೆನು ದೇವ
ನೀನೊಬ್ಬನೆ ಎನ್ನ ಸ್ವಾಮಿಯಾದೆಯೊ ದೇವ
ಏನೆಂದಾಡುವೆ ಅಳವಡುವೆ ಪಾಡುವೆ
ದೀನನೆನ್ನುತ ಕಾಯೊ ಹೊದ್ದಿದೆನು ನಿನ್ನ
ಮಾಣೊ ಛಲವ ಪುರಂದರ ವಿಠಲ ॥ ೩ ॥

**ಅಟ ತಾಳ**

ಬಿಲ್ಲು ಮುರಿಯೊ ದನುಜರ ಹೊಯ್ಯೋ, ಕೃಷ್ಣ
ಮಲ್ಲ ಬಂದನು ಕಾಣೊ ಮಧುರಿಗೆ
ಹುಲ್ಲು ಮಲ್ಲರ ತಿವಿಯೊ
ಖುಲ್ಲ ಮಾನವರ ಕೊಲ್ಲೊ, ರಂಗ
ಮಲ್ಲ ಬಂದನು ಕಾಣೊ ಮಧುರಿಗೆ
ಬಲ್ಲಿದ ನಮ್ಮ ಪುರಂದರ ವಿಠಲ
ಬಲ್ಲಿದ ಕಾಣೋ, ಊರ್ಜಿತ ಕಾಣೊ ಮಲ್ಲ ಕೃಷ್ಣ ॥ ೪ ॥

**ಏಕತಾಳ**

ಗಜವನಟ್ಟಿ ರಜಕರ ಮುರಿದೊಟ್ಟಿ

ಮಾವನ ಮಡಿಯುಟ್ಟು ಕುಬುಜೆ ತಂದ ದಿವ್ಯ

ಗಂಧವ ಪೂಸಿ ದಾಮ–ಸುದಾಮರ ಪೂಗಳ ಮುಡಿದು

ಮಾವನ ಮಡುಹಿದೆ ಪುರಂದರ ವಿಠಲ

ಬಿಡದೆ ಎನ್ನ ಮನದಲಿ ॥ ೫ ॥

**ಜತೆ**

ಜ್ಞಾನಂ ದೇಹಿ ಭಕುತೆ ವಿರಕುತಿ – ಅ–

ನ್ಯೂನಂ ದೇಹಿ ಪುರಂದರ ವಿಠಲ ॥ ೬ ॥

**Note:** Lyrics given below in yellow highlights are as per Ref. 3.

**ಧ್ರುವ ತಾಳ**

ರತಿ ಪತಿ ಪಿತನೆಂಬ ಚೆಲುವ ನುಳಿದು

ಈ ವರಹನೆಂಬೊ ಬಹುರೂಪು ಹರಿ ಶಿರಿ ಭೂಸತಿಯಾಗಿರಲು

ಅಡವಿಯೊಳಿಹ ಕರಡಿಯ ಮಗಳಿಗೆ ಮೆಚ್ಚುವರೆ

ಯೇ ಪುರಾಣ ಪುರುಷೋತ್ತಮನೆ ಅಮೃತಕೆ

ನಾರಾಯಣಿಯಾಗಿ ಮೋಹಿಪರೆ ಜಗಕಾಶ್ಚರ್ಯ ಚರಿತ್ರೆಯುಂಟೆ

ಪುರಂದರ ವಿಠಲ ಶರಣರ ಶರಣ ನಿನಗೆ ನಮೋ ನಮೋ ॥ 1 ॥

**ಮಟ್ಟೆ ತಾಳ**

ಜ್ಞಾನ ಭಕುತಿ ಇಲ್ಲದಾ ಹೀನನಾದಾ ಕಾರಣ

ನಾನು ನನ್ನದೆಂಬೊ ಹರಿ ಮಮ.......

ಇದೇನ ಮಾಡು ಬೆನ್ನ ಬಿಡದಿದು ನೀನೆ ಸ್ವತಂತ್ರ

ನಿನ್ನ ದಾಸಾ ನಾನೂ ದೀನ ಪುರಂದರ ವಿಠಲಾ ॥ 2 ॥

**ಅಟ ತಾಳ**

......................... ನೆ ನಿನ್ನ ಬಂಟನಾದೆಲೊ ದೇವ

ನೀನೊಬ್ಬನೆ ಯೆನ್ನ ಸ್ವಾಮಿಯಾದೆಲೊ ದೇವಾ

ಯೇನಂದಾಡುವೆ ಅಳವಡುವೆ .................................

ನಿರಾಶೆಯೆಂಬೊ ಬಲುಹು ದೇವರದೇವ

ಯೇನಂದಾಡುವೆ ಅಳವಡುವೆ ಕಾಡುವೆ

ದೀನನಾಥಾ ನೀ ಕಾವೆಯೆಂದು ....................

ಮಾಣಿದಲವಾ ಪುರಂದರ ವಿಠಲ ಯೇನೆಂದಾಡುವೆ ॥ 3 ॥

**ಝಂಪೆ ತಾಳ** ॥

ಬಿಲ್ಲ ಮುರಿದು ದನುಜರ ಹೊಯ್ಯೊ ಕೃಷ್ಣ

ಮಲ್ಲ ಬಂದ......................... ಮಧುರೆಗೈದು

ಹುಲ್ಲು ಮಲ್ಲರ ಮುರಿಯೊ ಕಂಸನ ಕೊಲ್ಲೊ ಕೃಷ್ಣ

ಪುರಂದರ ವಿಠಲ...................... ಕಾಣೊ ಕೃಷ್ಣ ॥ 4 ॥

**ಏಕ ತಾಳ** ॥

ಗಜವಂ ಶೀಳಿ ರಜಕನ ಮಡುಹಿ ಮಾವನ

ಮ......... ಕುಬುಜೆ ತಂದ ದಿವ್ಯ ಗಂಧವ ಪೂಸಿದೆ

ಮಾವನ ಮಡಿಯುಟ್ಟೆ ಧಾಮ ಸುಧಾಮರ

ಪೂಗಳ ಮುಡಿದೆ ಮಾವನ ......................

ಪುರಂದರ ವಿಠಲ ಬಲ್ಲಿದ ಕಾರಣ ॥ 5 ॥

**ಜತೆ**

ಜ್ಞಾನ ಭಕುತಿ ಮುಕುತಿ ವಿರಕುತಿ

ದಿನ ದಿನ........ ಪುರಂದರ ವಿಠಲ ॥ 6 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಸುಳಾದಿಯಲ್ಲಿ ಶ್ರೀ ಕೃಷ್ಣನ ಭಕ್ತಿಯನ್ನೇ ವಿವರಿಸಲಾಗಿದೆ.

೧. **ಕರಡಿಯ ಮಗಳು** = ಜಾಂಬವತಿ

**ನಾರಾಯಣಿ** = ಮೋಹಿನೀ ರೂಪದ ವಿಷ್ಣು

೨. **ಹೊದ್ದು** = ಹೊಂದು

**ಮಾಣ್** = ಬಿಡು

೫. **ಅನ್ಯೂನ** = ಕೊರತೆಯಿಲ್ಲದಂತೆ

**Classification:** Suladi
**Name of Suladi:** Krishna Mahimaa suladi
**Ankita:** purandara vittala
**Location:** NA
**Category:** Krishna Leele
**Sub-Category:** Krishna, manmatha, Vishnu, bhumi, Lakshmi, patni, amruta, purana, loka, deva, sharana, abharana, jnana, mamate, swatantra, bimba, pratibimba, billu, Mathura, ranga, gaja, kamsa, gandha, sudhama, pushpa, kaadu, karadi,
**Pravachana:** NA
**Explanation:** NA